# ಆಸ್ಗರ್ ಫರ್ಹಾದಿ



ಇರಾನ್‌ನಲ್ಲಿ 1972ರಲ್ಲಿ ಜನಿಸಿದ ಫರ್ಹಾದಿ, ಇಂದು ಜಗತ್ತಿನ ಮಹತ್ವದ ಚಲನಚಿತ್ರ ನಿರ್ದೇಶಕರಲ್ಲಿ ಒಬ್ಬರು. ಯೌವನದಲ್ಲಿಯೇ ಸಿನಿಮಾದ ಬಗ್ಗೆ ಆಸಕ್ತಿ ತಳೆದ ಫರ್ಹಾದಿ ತಮ್ಮ 14ನೇ ವಯಸ್ಸಿನಲ್ಲಿ ಕಿರುಚಿತ್ರಗಳ ನಿರ್ದೇಶನದಲ್ಲಿ ತೊಡಗಿಸಿಕೊಂಡರು. ಯುನಿವರ್ಸಿಟಿ ಆಫ್ ತೆಹ್ರಾನ್ಸ್ ಸ್ಕೂಲ್ ಆಫ್ ಡ್ರಮಾಟಿಕ್ ಆರ್ಟ್ಸ್‌ನಲ್ಲಿ ರಂಗಭೂಮಿಯಲ್ಲಿ ಪದವಿ ಶಿಕ್ಷಣ, ನಂತರ ರಂಗಭೂಮಿ ನಿರ್ದೇಶನದಲ್ಲಿ ಸ್ನಾತಕೋತ್ತರ ಪದವಿ ಕಲಿಯುವ ದಿನಗಳಲ್ಲಿಯೇ ಹಲವು ಕಿರುಚಿತ್ರ ಮತ್ತು ಟೀವಿ ಧಾರಾವಾಹಿಗಳನ್ನು ನಿರ್ದೇಶಿಸಿದವರು ಫರ್ಹಾದಿ.

ಮೊದಲ ಬಾರಿಗೆ 2002ರಲ್ಲಿ ತಯಾರಾದ ಚಲನಚಿತ್ರ 'ಲೋ ಹೈಟ್ಸ್'ಗೆ ಸಹ ಚಿತ್ರಕತೆಗಾರನಾಗಿ ಚಿತ್ರರಂಗ ಪ್ರವೇಶ ಮಾಡಿದ ಫರ್ಹಾದಿ ಅವರ ಚೊಚ್ಚಲ ನಿರ್ದೇಶನದ ಸಿನಿಮಾ 'ಡ್ಯಾನ್ಸಿಂಗ್ ಇನ್ ಡಸ್ಟ್'(2003). ಬಳಿಕ 'ಬ್ಯುಟಿಫುಲ್ ಸಿಟಿ'(2004), 'ಫೈರ್‌ವರ್ಕ್ಸ್ ವೆಡ್ನಸ್ಡೇ'(2006), 'ಅಬೌಟ್ ಎಲಿ'(2009), 'ಎ ಸಪರೇಷನ್'(2011) ಮತ್ತು 'ದ ಸೇಲ್ಸ್ ಮ್ಯಾನ್'(2016) ಚಿತ್ರಗಳನ್ನು ನಿರ್ದೇಶಿಸಿದರು. ಆಸ್ಕರ್, ಕಾನ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳ ಹಲವು ಪ್ರಶಸ್ತಿಗಳು ಆಸ್ಗರ್ ಫರ್ಹಾದಿ ಅವರಿಗೆ ಬಂದಿವೆ.

ಒಂದು ಸಮಯದಲ್ಲಿ ಅಥವಾ ಹಲವು ಸಂದರ್ಭಗಳಲ್ಲಿ ಮಧ್ಯಮವರ್ಗದ ಜನ ಇಂತಹ ಸಂದಿಗ್ಧಗಳಲ್ಲಿ ಬಾಳುವುದು, ನರಳುವುದು, ತಾಳುವುದು, ಜೀವನ ತಳ್ಳುವುದು ಸಾಮಾನ್ಯ ಮತ್ತೆ ಕೆಲವೊಮ್ಮೆ ಅನಿವಾರ್ಯವೂ ಆಗಿರುತ್ತದೆ!

ಸೇಲ್ಸ್ ಮ್ಯಾನ್ ಪದ ಕೇಳಿದೊಡನೆ ಮನಸ್ಸಿನಲ್ಲಿ ಮೂಡುವ ಮೊದಲ ಭಾವನೆ ಅತೀವ ಒತ್ತಡದ ಬದುಕು. ಮೊದಲನೆಯ ದೃಶ್ಯದಲ್ಲಿಯೇ ಬಹುಮಹಡಿ ಕಟ್ಟಡದ ಅಪಾರ್ಟ್‌ಮೆಂಟ್ ಒಂದು ನಲುಗಿ ಗೋಡೆಗಳು ಬಿರುಕುಬಿಟ್ಟು, ಅಲ್ಲಿನ ನಿವಾಸಿಗಳೆಲ್ಲಾ ಆತಂಕದಲ್ಲಿ ಹೊರಬೀಳುವ ಒತ್ತಡದ ಸನ್ನಿವೇಶವನ್ನು ಕಟ್ಟಿಕೊಡುವ ಮೂಲಕ ಸಿನಿಮಾಗೆ ಪ್ರವೇಶಿಕೆ ಒದಗಿಸುತ್ತದೆ. ಮುಂದೆ ಆ ದೃಶ್ಯ ಚಿತ್ರಕಥೆಯ ಕೇಂದ್ರ ಪಾತ್ರಗಳಾದ ಎಮಾದ್ ಮತ್ತು ರಾಣಾಳ ನಡುವಿನ ಸಂಬಂಧದಲ್ಲಿ ಮೂಡಲಿರುವ ಬಿರುಕಿಗೂ ರೂಪಕವಾಗುತ್ತದೆ. ಒಂದೊಂದು ಬಾರಿ ನೋಡಿದಾಗಲು ಹೊಸ ಆಯಾಮಕ್ಕೆ ತೆರೆದುಕೊಳ್ಳಲು, ಹೊಸ ಚರ್ಚೆಗೆ ಗ್ರಾಸವಾಗಲು ಅನುವಾಗುವ ಮತ್ತು ಹಲವು ಪದರುಗಳ ಓದಿಗೆ ಇಂಬು ನೀಡುವಂತೆ ಅತಿ ಪರಿಣಾಮಕಾರಿಯಾಗಿ ಕತೆ ಕಟ್ಟಿಕೊಡುವ ಈ ಸಿನಿಮಾ, ಮೊದಲನೇ ಸಲಕ್ಕೆ, ಮಧ್ಯಮ ವರ್ಗದ ವಿಘಟಿತ ಕುಟುಂಬವೊಂದಕ್ಕೆ ಸುಲಭವಾಗಿ